# ಕನ್ನಡ ರಾಜ್ಯೋತ್ಸವ 29-11-2023












ವಿದ್ಯಾವರ್ಧಕ ಪದವಿ ಕಾಲೇಜಿನಲ್ಲಿ ಇಂದು ವಿದ್ಯಾರ್ಥಿ ಸಮುದಾಯ ಸಂಘಟಿತವಾಗಿ ಅರ್ಥಪೂರ್ಣ ನೆಲೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿದರು. ಮುಖ್ಯ ಅತಿಥಿಯಾಗಿ ಕಾಲೇಜಿನ ಕನ್ನಡ ವಿಭಾಗ ಮುಖ್ಯಸ್ಥರಾದ ಡಾ.ಧನಂಜಯ ಪಾಲಹಳ್ಳಿಯವರು ಪಾಲ್ಗೊಂಡು ಕನ್ನಡ ನಾಡು ನುಡಿ ನೆಲ–ಜಲ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಾ ಕನ್ನಡ ಭಾಷೆ ೩೦೦೦ ವರ್ಷಗಳ ಪರಂಪರೆಯ ಜೊತೆಗೆ ೨೦೦೦ ವರ್ಷಗಳ ಸಾಹಿತ್ಯಿಕ ಇತಿಹಾಸವನ್ನು ಒಳಗೊಂಡಿದ್ದು, ಹೃದಯ ಶ್ರೀಮಂತಿಕೆಯ ಭಾಷೆಯಾಗಿದೆ. ಸತ್ವವುಳ್ಳ ಕನ್ನಡಿಗರ ಜೀವನಶೈಲಿ ಇತರರಿಗೆ ಅನುಕರಣೀಯ ಎಂದು ಅಭಿಪ್ರಾಯಪಟ್ಟರು.

ಸಮೃದ್ಧ ಸ್ವಾಭಿಮಾನದ ಸಂಕೇತವಾದ ಭವ್ಯ ಕರ್ನಾಟಕಕ್ಕೆ ಕಾರಣಕರ್ತರಾದ ನೆಲದ ಜನಪದರನ್ನು ಮೊದಲುಗೊಂಡು ಆಳಿದ ಅರಸರು ಹಾಗೂ ಕವಿಪುಂಗವರ ಕೊಡುಗೆ ಅನನ್ಯವಾಗಿದೆ. ಕನ್ನಡ ನಾಡು, ಸಾಹಿತ್ಯ, ಶಿಕ್ಷಣ, ಸಂಗೀತ, ಶಿಲ್ಪಕಲೆ, ವಾಸ್ತುಶಿಲ್ಪ ಮತ್ತು ಆಡಳಿತ ಮೊದಲಾದ ಕ್ಷೇತ್ರಗಳಲ್ಲಿ ಅವಿಸ್ಮರಣೀಯ ಸಾಧನೆಗೈದ ಬಗ್ಗೆ ಹಾಗೂ ಕನ್ನಡಿಗರು ಶೌರ್ಯ, ಪರಕ್ರಮ, ದೇಶಪ್ರೇಮ, ಔದಾರ್ಯ ಮತ್ತು ಕರುಣೆ, ಮಾನವೀಯ ಮೌಲ್ಯ, ಧರ್ಮ ಸಹಿಷ್ಣುತೆ, ಪ್ರೇಮ–ಪ್ರೀತಿ, ಸ್ನೇಹಪರ ಚಿಂತನೆಗೆ ಹೇಗೆ ಹೆಸರಾಗಿದೆ ಎಂಬುದನ್ನು ಕುವೆಂಪು, ಬೇಂದ್ರೆ, ಪುತಿನ, ಜಿ.ಎಸ್.ಶಿವರುದ್ರಪ್ಪ, ತೀನಂಶ್ರೀ, ಡಿ.ಎಸ್.ಕರ್ಕಿ, ಹುಯಿಲುಗೋಳು ನಾರಾಯಣರಾಯರು, ಜಿ.ಪಿ.ರಾಜರತ್ನಂ ಕವಿಗಳ ಕವಿತೆಗಳ ಸಾಲುಗಳನ್ನು ಉಲ್ಲೇಖಿಸಿ ಮಾತನಾಡಿದರು.

ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರು ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡಿಗರು ನಾಡು ನುಡಿಯ ಬಗ್ಗೆ ಜಾಗೃತಿ ವಹಿಸುವುದರ ಮೂಲಕ ಪರಭಾಷಿಕರ ಹಾವಳಿಯಿಂದ ಕನ್ನಡವನ್ನು ಮುಕ್ತಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ಕಿವಿಮಾತು ಹೇಳಿದರು. ಪ್ರೊ.ಜೆ.ಮಂಜು ಹಾಗೂ ಸಂಗಡಿಗರು ನಾಡಗೀತೆಯನ್ನು ಹಾಡುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.  ಸಂಚಾಲಕರಾದ ಪ್ರೊ.ಮೋಹನ್‌ಕುಮಾರ್.ಎನ್ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಧ್ಯಾಪಕ ಸಲಹೆಗಾರರಾದ ಪ್ರೊ.ಪಲ್ಲವಿ.ಡಿ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ೩೦೦ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ವಿದ್ಯಾರ್ಥಿ ಮನೋಜ್ ಕುಮಾರ್ ನಿರೂಪಿಸಿ, ಚಂದು.ಹೆಚ್.ಎಸ್. ವಂದಿಸಿದರು.






ಸಮೃದ್ಧಿ ಕರ್ನಾಟಕ
ಸಮೃದ್ಧಿ ಕರ್ನಾಟಕ
ಡಾ. ಎಸ್. ಮರೀಗೌಡ
ಪ್ರೊ.ಪಲ್ಲವಿ.ಡಿ

















































